ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/ಪ್ರಕಟಣೆ/2020 ದಿನಾಂಕ: 24-12-2020

# ಪತ್ರಿಕಾ ಪ್ರಕಟಣೆ

## ಪಿಜಿಸಿಟಿ-2020 – ಮೊದಲನೇ ಸುತ್ತಿನ ಸೀಟು ಹಂಚಿಕೆ

2020ನೇ ಸಾಲಿನ ಎಂಇ / ಎಂಟೆಕ್ / ಎಂ.ಆರ್ಕ್, ಎಂ.ಸಿ.ಎ, ಎಂಬಿಎ ಕೋರ್ಸುಗಳ ಪ್ರವೇಶಾತಿಗೆ ಮೊದಲನೇ ಸುತ್ತಿನ ಸೀಟು ಹಂಚಿಕೆಯನ್ನು ಈ ಕೆಳಗಿನ ವೇಳಾಪಟ್ಟಿಯಂತೆ ನಡೆಸಲಾಗುವುದು. ಅರ್ಹ ಅಭ್ಯರ್ಥಿಗಳು ಇಚ್ಚೆ / ಆಯ್ಕೆಗಳನ್ನು ದಾಖಲಿಸಿ ಸೀಟು ಹಂಚಿಕೆಯಲ್ಲಿ ಭಾಗವಹಿಸಬಹುದಾಗಿದೆ. ಸೀಟ್ ಮ್ಯಾಟ್ರಿಕ್ಸ್ ಹಾಗು ಶುಲ್ಕದ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ವಿದ್ಯಾರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಅಭ್ಯರ್ಥಿಗಳು ದಾಖಲಿಸುವ ಇಚ್ಚೆ / ಆಯ್ಕೆಗಳನ್ನು ಪರಿಗಣಿಸಿ ಮೆರಿಟ್ ಆಧಾರದ ಮೇಲೆ ಸೀಟು ಹಂಚಿಕೆಯನ್ನು ಮಾಡುವುದರಿಂದ, ಅಭ್ಯರ್ಥಿಗಳು ನೇರವಾಗಿ Options ಗಳನ್ನು ದಾಖಲಿಸದೆ, ತಮಗೆ ಇಷ್ಟವಿರುವ ಕೋರ್ಸು / ಕಾಲೇಜುಗಳ ಒಂದು ಪಟ್ಟಿಯನ್ನು ಮಾಡಿಕೊಂಡು; ಪೋಷಕರೊಡನೆ ಚರ್ಚಿಸಿ, ನಂತರ Options ಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ನಿಗದಿತ ಲಿಂಕ್‌ನಲ್ಲಿ ದಾಖಲಿಸಲು ಸೂಚಿಸಿದೆ ಹಾಗು ಇಚ್ಚೆಯನ್ನು (Options) ನಮೂದಿಸುವಾಗ, ಆದ್ಯತಾ ಕ್ರಮ (prioritization) ಅನುಸರಿಸಲು ಸಹ ಸೂಚಿಸಿದೆ. ಸೀಟು ಹಂಚಿಕೆಗೆ ಅಭ್ಯರ್ಥಿಗಳು ಇಚ್ಛೆಗಳನ್ನು / Options ಗಳನ್ನು ನಮೂದಿಸುವ ಬಗ್ಗೆ ವಿಶ್ಲೇಷಣೆ ಸಹಿತ ವಿವರಗಳನ್ನು ಪಿಜಿಸಿಇಟಿ-2020-ಮಾಹಿತಿ ಪುಸ್ತಕದಲ್ಲಿ ನೀಡಿದ್ದು, ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ.

ಅಭ್ಯರ್ಥಿಗಳು ಆಗಿಂದಾಗ್ಗೆ ಪ್ರಕಟಿಸುವ ಮಾಹಿತಿಗಾಗಿ ಪ್ರತಿದಿನ ವೆಬ್‌ಸೈಟ್ http://kea.kar.nic.in ಅನ್ನು ನೋಡಲು ಸೂಚಿಸಿದೆ.

ಸಹಿ/-

ಕಾರ್ಯನಿರ್ವಾಹಕ ನಿರ್ದೇಶಕರು

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru – 560 012.
Phone: 080-2356 4583, 2336 1786, Fax: 080-2346 1576
e-mail : keauthority-ka@nic.in Website : http://kea.kar.nic.in